

ರೈನೋಗಳ ಗರ್ಭಾವಧಿ 15–16 ತಿಂಗಳು.

ರೈನೋಗಳ ಸರಾಸರಿ ಆಯುಷ್ಯ 30ರಿಂದ 50 ವರ್ಷಗಳು.

ವಿಯೆಟ್ನಾಂ ದೇಶದಲ್ಲಿ ರೈನೋದ ಮಾಂಸಕ್ಕೆ ಹೆಚ್ಚು ಬೇಡಿಕೆ ಇದೆ.

ಮೂತ್ರ ಮತ್ತು ಮಲದ ವಾಸನೆಯಿಂದ ಇತರ ರೈನೋಗಳ ಇರುವಿಕೆಯನ್ನು ಗ್ರಹಿಸುತ್ತವೆ.

ಕೊಂಬುಗಳ ಕಳ್ಳ ಮಾರಾಟದ ಬೃಹತ್ ಜಾಲ ಚೀನಾ ಮತ್ತು ವಿಯೆಟ್ನಾಂ ದೇಶಗಳಲ್ಲಿ ಪ್ರಬಲವಾಗಿದೆ. ರೈನೋಗಳ ರಕ್ಷಣೆಗಾಗಿ ಅಸ್ಸಾಂ ರಾಜ್ಯ ಸರ್ಕಾರ 2005ರಲ್ಲಿ 'ಇಂಡಿಯಾ ರೈನೋವಿಷನ್ 2020' ಯೋಜನೆ ಪ್ರಾರಂಭಿಸಿದ್ದು, ಅದು ಯಶಸ್ವಿಯಾಗಿ ನಡೆಯುತ್ತಿದೆ.



ಬಿಳಿ ರೈನೋದ ಕೊಂಬು ವರ್ಷಕ್ಕೆ 7 ಸೆಂಟಿ ಮೀಟರ್‌ವರೆಗೂ ಬೆಳೆಯುತ್ತದೆ. 150 ಸೆಂಟಿ ಮೀಟರ್ ಉದ್ದ ಬೆಳೆದ ಮಾಹಿತಿ ಇದೆ.

## ಕಾಜಿರಂಗ ಮತ್ತು ಕಂಡಲ್ಲಿ ಗುಂಡು!

ನಮ್ಮಲ್ಲಿರುವ ರೈನೋಗಳ ಪೈಕಿ ಎರಡು ಸಾವಿರಕ್ಕೂ ಹೆಚ್ಚು ರೈನೋಗಳು, 'ರೈನೋಗಳ ಸ್ವರ್ಗ' ಎಂದೇ ಪ್ರಖ್ಯಾತಿ ಗಳಿಸಿರುವ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಇವೆ. ಅದಕ್ಕೆ ಕಾರಣ ಅಲ್ಲಿ ಜಾರಿಯಲ್ಲಿರುವ ಅತ್ಯಂತ ಕಠಿಣ ಹಾಗೂ ವಿಚಿತ್ರ ಕಾನೂನು! 430 ಚ.ಕಿ.ಮೀ. ವಿಸ್ತೀರ್ಣದ ಕಾಜಿರಂಗದಲ್ಲಿ ಅರಣ್ಯ ಇಲಾಖೆಯ ಅಧಿಕಾರಿ, ವಾಚರ್ ಮತ್ತು ಗಾರ್ಡ್‌ಗಳನ್ನು ಹೊರತುಪಡಿಸಿ ಬೇರೆ ಯಾರೂ ಕಾಲ್ನಡಿಗೆಯಲ್ಲಿ ಸಂಚರಿಸುವಂತಿಲ್ಲ. ಹಾಗೇನಾದರೂ ಕಾಡಿನಲ್ಲಿ ನಡೆದಾಡಿದರೆ ಅವರ ಮೇಲೆ ಕಂಡಲ್ಲಿ ಗುಂಡು ಹಾರಿಸುವ ಕಾನೂನು ಜಾರಿಯಲ್ಲಿದೆ ಎಂದು ಬಿಬಿಸಿ ಮತ್ತು ನಮ್ಮ ಹಲವು ಪತ್ರಿಕೆಗಳು ವರದಿ ಮಾಡಿದ್ದವು.

ಇದರ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಿದ್ದ ಬಿಬಿಸಿ ಇದು ಮಾನವ ಹಕ್ಕಿನ ಸ್ಪಷ್ಟ ಉಲ್ಲಂಘನೆ ಎಂದಿತ್ತು. ಸ್ಥಳೀಯ ಸಂರಕ್ಷಣಾ ತಂಡದವರು ಇದು ಅರಣ್ಯ ಹಕ್ಕು ಕಾಯ್ದೆಗೆ ವಿರುದ್ಧ ಎಂದು ವಾದಿಸಿದ್ದರು.

2013ರಲ್ಲಿ 27 ರೈನೋಗಳು ಕಳ್ಳಬೇಟೆಗೆ ಬಲಿಯಾಗಿದ್ದವು. ಅರಣ್ಯ ಇಲಾಖೆಯವರು ಕಾಲ್ನಡಿಗೆಯಲ್ಲಿ ಅನಧಿಕೃತವಾಗಿ ಕಾಡು ಪ್ರವೇಶಿಸುವವರ ಮೇಲೆ ಗುಂಡು ಹಾರಿಸಲು ಶುರು ಮಾಡಿದಾಗ ರೈನೋ ಹತ್ಯೆಗೆ ಕಡಿವಾಣ ಬಿತ್ತು ಎಂದು ಅನೇಕ ಪತ್ರಿಕೆಗಳಲ್ಲೂ ವರದಿಯಾಗಿತ್ತು. ಈ ಸುದ್ದಿ ಅಂತರಾಷ್ಟ್ರೀಯ ವಲಯದಲ್ಲಿ ಭಾರೀ ವಿವಾದ ಸೃಷ್ಟಿಸಿತ್ತು. ರೈನೋಗಳ ಸಾವಿಗಿಂತ ಅರಣ್ಯ ಇಲಾಖೆಯವರು ಹಾರಿಸಿದ ಗುಂಡುಗಳಿಗೆ ಸಿಕ್ಕಿ ಸತ್ತವರ ಸಂಖ್ಯೆ ಹೆಚ್ಚಾಗಿತ್ತು.

ಕಾಡಿನ ಮಧ್ಯೆ ಯಾವುದೇ ಹಳ್ಳಿ ಆಗಲಿ ಜನವಸತಿಯಾಗಲಿ ಇಲ್ಲ, ಹಾಗಾಗಿ ಅರಣ್ಯ ಇಲಾಖೆ ಮತ್ತು ಸಂಶೋಧಕರನ್ನು ಹೊರತುಪಡಿಸಿದರೆ ಕಾಡಿನ ಒಳಗೆ ಓಡಾಡುವವರು ಯಾರೂ ಇಲ್ಲ. ಎದುರಿಗೆ ಬಂದವರನೆಲ್ಲ ಕೊಂದಿಲ್ಲ, ಅನುಮಾನ ಹುಟ್ಟಿಸುವ ಇಲ್ಲವೇ ಬೇಟೆಯಲ್ಲಿ ಭಾಗಿಯಾದವರ ಮೇಲಷ್ಟೇ ಗುಂಡು ಹಾರಿಸುತ್ತೇವೆ ಅದಕ್ಕೆ ನಮಗೆ ಪರವಾನಿಗೆ ಇದೆ ಎಂದು ಗಾರ್ಡ್‌ಗಳು ಬಿಬಿಸಿಗೆ ಹೇಳಿಬಿಟ್ಟಿದ್ದರು. ಅಂಥದೊಂದು ಆದೇಶವನ್ನು ನಾನು ನೋಟಿಸ್ ಬೋರ್ಡಿನಲ್ಲಿ ನೋಡಿದ್ದೆ ಎಂಬ ಅರಣ್ಯ ಇಲಾಖೆಯ ಕೆಳಹಂತದ ಅಧಿಕಾರಿಯೊಬ್ಬರ ಹೇಳಿಕೆ ಈ ವಿವಾದಕ್ಕೆ ಮತ್ತಷ್ಟು ಪುಷ್ಟಿ ನೀಡಿತ್ತು.

ಪ್ರತಿಕ್ರಿಯಿಸಿ: feedback@sudha.co.in

